International Journal of Kannada Research 2018; 4(2): 18-20

International Journal of Kannada Research
www.kannadajournal.com

**ISSN: 2454–5813**
IJKR 2018; 4(2): 18-20
© 2018 IJKR
www.kannadajournal.com
Received: 06-02-2018
Accepted: 07-03-2018

**Dr. Buddappa Singe**
Associate Professor in Kannada
Govt Degree College Yadgir,
Karnataka, India

**Correspondence**
**Dr. Buddappa Singe**
Associate Professor in Kannada
Govt Degree College Yadgir,
Karnataka, India

# ಕಲೆಯ ತವರು "ನೈಜಾಮ ರಾಜ್ಯ"

**Dr. Buddappa Singe**

ನಮ್ಮ ದೇಶದ ನಮ್ಮ ನಾಡಿನ ಸಂಸ್ಕೃತಿಗೆ ಪರಂಪರೆಯ ಇತಿಹಾಸವಿದೆ. ಆದಿಮಾನವನಿಂದ ಆಧುನಿಕ ಮಾನವನವರೆಗೆ ಇತಿಹಾಸವನ್ನು ಅವಲೋಕಿಸಿದರೆ ಮಾನವ ಸಂಸ್ಕೃತಿಯಲ್ಲಿ ವಿಕಾಸ ಶೀಲತೆ ಕಂಡು ಬರುತ್ತದೆ. ಎಂದು ಇ.ಬಿ.ಟೇಲರ್ ಹೇಳಿದ್ದಾರೆ. ಸಂಸ್ಕೃತಿಯ ವಿಕಾಸ ಕ್ರಮದಲ್ಲಿ ಆದಿಮ, ಅರೆನಾಗರಿಕೆ ನಾಗರಿಕವೆಂಬ ಮೂರು ಪ್ರಮುಖ ಹಂತಗಳನ್ನು ಕಾಣುತ್ತೇವೆ. ಈ ಪ್ರಮುಖ ಮಜಲುಗಳಲ್ಲಿ ಅತಿಮುಖ್ಯ ವಾದವುಗಳೆಂದರೆ ಆದಿಮ ಮತ್ತು ಅರೆನಾಗರಿಕ ಸಂಸ್ಕೃತಿ ಈ ಎರಡೂ ಸಂಸ್ಕೃತಿಯಲ್ಲಿ ಬದುಕು ಸಾಗಿಸುತ್ತಿರುವ ಜನಪರ ಆಚಾರ, ವಿಚಾರ ನಂಬುಗೆ ಸಂಪ್ರದಾಯ ಕಲೆ ಸಾಹಿತ್ಯಗಳ ವಿಕಾಸವನ್ನು ಪರಿಗಣಿಸುವಲ್ಲಿ ಮುಖ್ಯವಾಗಿ ಎರಡು ಬಗೆಯ ಸಾಮಗ್ರಿಯನ್ನು ಎದುರು ಹೋಗುತ್ತೇವೆ. ಯುಗಯುಗದಿಂದ ಗ್ರಂಥಸ್ಥವಾಗದೆಯೇ ಕೇವಲ ಬಾಯಿಮಾತಿನ ಸಂಪ್ರದಾಯದಲ್ಲಿ ಜ್ಞಾನವಾಹಿನಿ ಹರಿಯುತ್ತದೆ. ಈ ಜ್ಞಾನವಾಹಿನಿಯನ್ನು ಫುಲ್‌ಕೆರ್ ಅನ್ನುವ ಹೆಸರಿನಿಂದ ಗುರುತಿಸಲಾಗಿದೆ.

ಹೈದ್ರಾಬಾದ ಕರ್ನಾಟಕದ ವಾಯುವ್ಯ ಹಾಗೂ ಪಶ್ಚಿಮದ ಗಡಿ ಪ್ರದೇಶದಲ್ಲಿ ಉರ್ದುವಿನ ಜೊತೆಗೆ ಮರಾಠಿಯ ಪ್ರಾಬಲ್ಯ ಹೆಚ್ಚಾಗಿ ಬ.ಕೆ.ಯಲ್ಲಿರುವುದರಿಂದ ಹೈದರಾಬಾದ ಕರ್ನಾಟಕದ ಪ್ರದೇಶದ ಕೆಲವು ಮನೆಗಳಲ್ಲಿ ಇಂದಿಗೂ ಭಿನ್ನವಾದ ಸಂಸ್ಕೃತಿ ಮತ್ತು ಕಲೆಯ ಬದಲಾವಣೆ ಕಂಡು ಬರುತ್ತಿದೆ. ಕಲಬುರರ್ಗಿ ಜಿಲ್ಲೆಯ ಆಳಂದ, ಅಫಜಲಪೂರ, ಗಾಣಗಾಪೂರ ಹಾಗೂ ಮಹಾರಾಷ್ಟ್ರದ ಗಡಿಭಾಗಗಳಲ್ಲಿ ಮರಾಠಿಯ ಪರಂಪರೆಯನ್ನು ಹುಟ್ಟುಹಾಕಿದ್ದಾರೆ ಇಂದಿಗೂ ಬೀದರ ಜಿಲ್ಲೆಯಲ್ಲಿ ಅನೇಕ ಕುಟುಂಬಗಳು ಕನ್ನಡ ಬಾರದೆ ಮರಾಠಿ ಸಂಸ್ಕೃತಿಯ ಜಾಡಿನಲ್ಲಿವೆ.

ಉರ್ದು ಮರಾಠಿಗಳ ಪ್ರಾಬಲ್ಯ ಒಂದೆಡೆಗಾದರೆ ಈ ಭಾಗದ ಈಶಾನ್ಯ ಹಾಗೂ ಪೂರ್ವದ ಗಡಿಗಳು ಆಂಧ್ರಕ್ಕ ಹತ್ತಿರವಿವುದರಿಂದ ತೆಲಗೂ ಸಹ ತನ್ನ ಕಳ್ಳುಬಳ್ಳಿಯನ್ನು ಹಬ್ಬಿಸಿದೆ ತಾಂಡೂರು ಕೊಡಂಗಲ್‌ಗಳ ಪ್ರಾಂತ ವಿಂಗಡನೆಗಿಂತ ಹೈದರಾಬಾದ ಕರ್ನಾಟಕ ಅನೇಕ ಕಲೆಗಳ ತವರೂರು ಪ್ರಾಚೀನ ಕರ್ನಾಟಕದ ಇತಿಹಾಸದಲ್ಲಿ ಹೈದರಾಬಾದ ಕರ್ನಾಟಕಕ್ಕೆ ವಿಶಿಷ್ಟವಾದ ಸ್ಥಾನವಿದೆ ಮಾನವನ ಇತಿಹಾಸ ಹಲವಾರು ರೀತಿಯಿಂದ ಬೆಳೆದುಬಂದಂತೆ, ಜೊತೆಗೆ ಪ್ರಾಂತಿಯ ಭಾಗಗಳಲ್ಲಿಯೂ ರಾಜಾಶ್ರಯಗಳಿಂದ ಕಲೆ ವಿವಿಧ ಶೈಲಿಗಳಲ್ಲಿ ಧಾರ್ಮಿಕ ಜೀವನ ವೈವಿದ್ಯಮಯವಾಗಿ ಚಿತ್ರಕಾರರು ಸೃಷ್ಟಿಸಿದ್ದಾರೆ. ಉತ್ಕೃಷ್ಟ ಕಲಾಕೃತಿಗಳು ರಾಷ್ಟ್ರದ ಹಿರಿಮೆಯನ್ನು ಹೆಚ್ಚಿಸಿವೆ ಸಮಕಾಲಿನ ಪ್ರಜ್ಞೆಯೊಂದಿಗೆ ಈ ಪ್ರದೇಶ ವಾಸ್ತುಶಿಲ್ಪಗಳಲ್ಲಿ ಮೂರ್ತಿಶಿಲ್ಪಗಳಲ್ಲಿ ತನ್ನದೆ ಆದ ಕಲ್ಪನೆ ನಿರೂಪಿಸಿಕೊಂಡಿದೆ ಹಲವಾರು ದಾಳಿಗಳ ಪ್ರಭಾವದಿಂದ ಬರಗಾಲ ಭೀಕರವಾದ ಬಡತನ ಎದುರಿಸುತ್ತ ನಿರಂತಕವಾಗಿ ತನ್ನ ನೋವನ್ನು ಚಿತ್ರಕಲೆ, ಶಿಲ್ಪ ವಾಸ್ತುಕಲೆಗಳಿಗೆ ತೋರಿಸಿ ಕೊಟ್ಟಿದೆ ಹರಿದು ಹಂಚಿ ಹೋಗಿರುವ ಈ ನಾಡಿನಲ್ಲಿ ಕಲಾಕೇಂದ್ರಗಳು ಇನ್ನು ಜೀವಂತವಾಗಿವೆ, ಕಲಬುರ್ಗಿಯ ಕಾಳಗಿ, ಶಿರವಾಳ, ಸನ್ನತಿ, ಏವೂರು, ಕಿರಣಗಿಯಲ್ಲಿ ರಚನೆಗೊಂಡ ವಿನಯಾದಿತ್ಯನ (681–696) ಶಿಲಾ ತೋರಣ ಒಂದು ದೊರೆತಿದೆ. ಕುಕನೂರಿನ ನವಲಿಂಗೇಶ್ವರ ದೇವಾಲಯವು ಶಿಲ್ಪ ಕಲೆಯಿಂದ ಪ್ರಾಮುಖ್ಯತೆಯನ್ನು ಪಡೆದಿದೆ. ಕುಕನೂರು ಗ್ರಾಮವು ಪ್ರಮುಖ ಅಗ್ರಹಾರಗಳಲ್ಲಿ ಒಂದಾದ್ದರಿಂದ ಅನೇಕ ದೇವಾಲಯಗಳು ತಲೆಯೆತ್ತಲಾಯಿತ್ತು.

ಕಲಬುರ್ಗಿ ಬಂದೇನವಾಜ ದರ್ಗಾದಲ್ಲಿ ಮೂಡಿಬಂದಿರುವ ಮುಸ್ಲಿಂರ ಶೈಲಿಯ ಕಲೆ ಅನೇಕ ಮಸೀದಿಗಳಲ್ಲಿ ಟೆಂಪ್ರಾ ಪೇದಿಂಗ್ಸಗಳನ್ನು ವಿವಿಧ ಆಕಾರಗಳ ಸುಂದರ ನಕ್ಷೆಗಳು ಎಲೆ, ಹೂವು, ಆಕಾರದ ಅಲಂಕಾರಿಕ ಚಿತ್ರಗಳು ಇಂದಿಗೂ ಲವಲವಸುತ್ತಿವೆ.

ಹದಿನೇಳನೆಯ ಶತಮಾನದ ಸುರಪೂರದ ನಾಯಕರ ರಾಜಾಶ್ರಯದಲ್ಲಿ ಗುರು ಡಾದ್ರಿ ಚಿತ್ರಕಲಾವಿದ ಈ ನಾಡಿಗೆ ಹೊಸ ಮೆರುಗನ್ನು ತಂದುಕೊಟ್ಟ ವ್ಯಕ್ತಿ ಎಂದು ಹೇಳಬಹುದು ಪಾಶ್ಚಿಮಾತ್ಯರಿಗೂ ಕೂಡಾ

ಬರೆರಗುಗೊಳಿಸುವ ಇವರ ಕಲಾ ಕೃತಿಗಳು ಹೃದಯ ತುಂಬಿನಿಂತು ಕೊಂಡಿದೆ. ಕಲೆಯು ಸೌಂದರ್ಯದ ಮತ್ತೊಂದು ಮುಖ ಕಲೆ ಎನ್ನುವದು ಸೌಂದರ್ಯ ನುಭವದ ಅಭಿವ್ಯಕ್ತಿ ವ್ಯಷ್ಠಿಯಲ್ಲಿ ಅರಳಿದ ಕಲೆ ಸಮಷ್ಠಿಯವಾಗುತ್ತದೆ, ಶಿಷ್ಟ ಕಲೆಗಳಲ್ಲಿ ವ್ಯಷ್ಠಿ ಉಳಿಸಿಕೊಂಡರೆ ಜನಪದ ಕಲೆಗಳಲ್ಲಿ ವ್ಯಷ್ಠಿ ಮರೆತು ಸಮಷ್ಟಿ ಪ್ರಧಾನವಾಗುತ್ತದೆ.

ಹೈದರಾಬಾದ, ಕರ್ನಾಟಕ ಪ್ರದೇಶ ಸುಮಾರು 6600–700 ವರ್ಷಗಳ ಕಾಲ ಪರಕೀಯ ಪ್ರಭಾವದಲ್ಲಿ ಉಸುರುಗಟ್ಟಿ ಕೊಂಡಿರಬೇಕಾಗಿತ್ತು ಮಹ್ಮದೀಯ ಸುಲ್ತಾನರು ಬಹಮನಿ ರಾಜ್ಯ ಸ್ಥಾಪನೆ ನೈಜಾಮ ದೊರೆಗಳ ಆಡಳಿತ ಜೊತೆಗೆ ಪೇಶ್ವೆಗಳ ಸಂಪರ್ಕದಿಂದ ಇಲ್ಲಿನ ಭಾಷೆಯ ಸಂಸ್ಕೃತಿ ಆಚರಣೆಗಳು ಭಿನ್ನವಾದವು ಇದು ಎಂದಿನಿಂದಲೂ ಕನ್ನಡದ ನೆಲವೇ” ಎಂದು ಹಿಂದೆಯೇ ಡಿ.ಕೆ. ಭೀಮಸೇನರಾಯರ ಮಾತು ಸರಿಯಾಗಿಯೇ ಇದೆ ರಾಷ್ಟ್ರಕೂಟರ ರಾಜಧಾನಿ ನಗರವಾಗಿದ ಮಳಖೇಡ, ವೇದ ವೇದಾಂಗಗಳೊಡನೆ ಕನ್ನಡದ ಮಾಣಿಗಳಿಗೂ ಸಹ ಪ್ರೋತ್ಸಾಹ ನೀಡಿದ ಚಾಲುಕ್ಯರ ಕಾಲದ ಪ್ರಸಿದ್ಧ ಘಟಿಕಾಸ್ಥಾನ ನಾಗಾವಿ 7 ನೆಯ ತೈಲನಿಂದ ಕಲ್ಯಾಣನಗರ ತಿರುಳ್ಗನ್ನಡದ ಮೇಲೆಗಳಲ್ಲೇ ಬರುವ ಆ ವಿದಿತ ಮಹಾ ಕೊಪಣನಗರ–ಕೊಪ್ಪಳ ಎಲ್ಲವೂ ಈ ನೆಲದ ಕನ್ನಡದ ವಾಗ್ಗಿಭವೋನ್ನತಿಯನ್ನು ಸಾಗುತ್ತಿರುವ ನೆಲೆಗಳು. ಪೂರ್ವದಲ್ಲಿ ಕಲಬುರ್ಗಿ ಜಿಲ್ಲೆಯ ಆಧೀನದಲ್ಲಿದ್ದ ತಾಲೂಕಗಳಾಗಿದ್ದವು. ಇವೆಲ್ಲವೂ ತೆಲಗೂ ಸಂಸ್ಕೃತಿಗೆ ಒಳಗಾದ ಪ್ರದೇಶ ಈಗಲೂ ಸೇಡಂ, ಯಾದಗಿರಿ, ಗುರುಮಿಠಕಲ್, ರಾಯಚೂರು ಈ ಭಾಗಗಳು ತೆಲುಗಿನ ಬಳಕೆ ಸಂಸ್ಕೃತಿಗೆ ಜಾಡಿನಲ್ಲಿರುವದನ್ನು ಕಾಣುತ್ತೇವೆ.

ಉರ್ದು, ಮರಾಠಿ ತೆಲುಗಿನ ಪ್ರಭಾವಕ್ಕೆ ಒಳಗಾದ ಇಲ್ಲಿಯ ಜನತೆಯ ನಡೆನುಡಿ, ಕಲೆ, ಸಾಹಿತ್ಯ, ಸಂಸ್ಕೃತಿ ಭಿನ್ನವಾದ ರೀತಿಯಲ್ಲಿ ಹರಿದು ಬರುತ್ತಿದೆ ಆದರೂ ಹೈದರಾಬಾದ ಕರ್ನಾಟಕ ಅನೇಕ ಧರ್ಮಗಳ ತವರುಮನೆಯ ತಂಗುದಾಣವಾಗಿದೆ. ಅಂತೆಯೇ ಇಲ್ಲಯ ಎಲ್ಲ ಕಲೆ ಸಂಸ್ಕೃತಿ ಸಮ್ಮಿಶ್ರಮಯ ಉಳಿದುಕೊಂಡಿದೆ.

ಕಲಬುರ್ಗಿ ರಾಯಚೂರು ಮತ್ತು ಬೀದರ ಜಿಲ್ಲೆಗಳಲ್ಲಿ ಮುಸ್ಲಿಂ ಸಂಸ್ಕೃತಿ ಮತ್ತು ಉರ್ದು ಭಾಷೆಯ ವಿಪರೀತ ಪ್ರಭಾವ ಮತ್ತು ಬಳಕೆಯಿಂದಾಗಿ ಇಲ್ಲಿಯ ಸಂಸ್ಕೃತಿ, ಸಾಹಿತ್ಯ, ಕಲೆ ಮತ್ತು ಕನ್ನಡ ಭಾಷೆ ಜನರ ಅರವಿನಿಂದ ಬಹಳ ದೂರ ಸರಿದವು ಕರ್ನಾಟಕದ ಬೇರೆಡೆಯ ಕಲೆ ಸಂಸ್ಕೃತಿಗಿಂತ ಹೈ.ಕ. ದಲ್ಲಿಯ ಕಲೆ, ಸಂಸ್ಕೃತಿ ವಿಶಿಷ್ಟವೆನಿಸುತ್ತದೆ. ಮಣ್ಣೂರು, ಮಳಖೇಡ, ಹರಸೂರದಂತ ಅನೇಕ ಗ್ರಾಮಗಳು ಒಂದಾನೊಂದು ಕಾಲಕ್ಕೆ ಮೆರೆದ ಶ್ರೇಷ್ಟ ಐತಿಹಾಸಿಕ ಕಲೆ ಕೇಂದ್ರಗಳಾಗಿದ್ದವು ಇಂದಿಗೂ ಕೂಡಾ ಈ ನಾಡು ರಾಷ್ಟ್ರಕೂಟ, ಹೊಯ್ಸಳ, ಜೈನ, ಶೈವ, ಮುಸ್ಲಿಮರ ವಿವಿಧ ಸಾಂಸ್ಕೃತಿಕ ಧಾರ್ಮಿಕ ಜೀವನದ ವಿಕಾಸ ಚಿತ್ರಗಳಿಂದ ದಂಗು ಪಡಿಸುತ್ತವೆ.

ರಾಷ್ಟ್ರಕೂಟರ ದೊರೆ ನೃಪತುಂಗ ಕಾಲಕ್ಕೆ ಅಕ್ಕುಜ್ಜಕಲ್ಲುಕಡಿಗ ಪ್ರಸಿದ್ಧ ವಾಸ್ತುಶಿಲ್ಪಕಾರ ನಿರ್ಮಾಣಮಾಡಿದ ಕಟ್ಟಡ ಇಂದಿಗೂ ನಾಗಾವಿಯಲ್ಲಿ ಕೂಗಿ ಕರೆಯುತ್ತದೆ. ಇದೇ ಕಾಲದ ಮಹಾಂ ಕಾಳಿ ಶಿಲ್ಪಿಯ ಕಲಾಕೃತಿಗಳು ಹೈದರಾಬಾದ ಮತ್ತು ಲಂಡನ್ ಬ್ರಿಟಿಷ ಮ್ಯೂಜಿಯಂಗಳಲ್ಲಿ ಸಂಗ್ರಹಿಸಿಡಲಾಗಿದೆ.

ರಾಯಚೂರು ಜಿಲ್ಲೆಯ ಇಟಗಿಯಲ್ಲಿಯ ಮಹಾದೇವ ದಂಡಾದಿಪತಿಯು ದೇವಾಲಯವನ್ನು ಕಟ್ಟಿಸಿದ ಮೇಲೆ ರತಿ–ರಂಭೆಯರನ್ನು ಹೋಲುವ ಕಾಮಿನಿಯರನ್ನು ಆಯ್ದು ಪುರವರ್ಗದ ಸೂಳೆಯರನ್ನಾಗಿ ಮಾಡಿದ ಉಲ್ಲೇಖ ಅಲ್ಲಿಯ ಶಾಸನದಲ್ಲಿದೆ.

ಬಾದಾಮಿ ಚಾಲುಕ್ಯರ ಕಾಲ ವೈದಿಕ ಧರ್ಮದ ಪುನರುತ್ಥಾನದ ಕಾಲ, ಇಟಗಿ ಕಲ್ಯಾಣ ಚಾಳುಕ್ಯರ ದೇವಾಲಯಗಳಲ್ಲಿ ಕಂಡುಬರುವ ಜಾಲಂಧ್ರಗಳು ವೈಶಿಷ್ಟ್ಯ ಪೂರ್ಣವಾಗಿವೆ. ಜಾಲಂಧ್ರಗಳನ್ನು ಸಾಮಾನ್ಯವಾಗಿ ದ್ವಾರಗಳ ಎರಡುಬದಿಗೆ ಅಳವಡಿಸಿರುತ್ತಾರೆ. ಇವು ದ್ವಾರಶಾಖೆ ಮತ್ತು ಅರ್ದ ಕಂಬಗಳ ನಡುವೆ ಇರುತ್ತವೆ. ಜಾಲಂದ್ರಗಳನ್ನು ಬಳಪದ ಕಲ್ಲಿನಲ್ಲಿ ಕೊರೆದಿರುವುದರಿಂದ ಅವು ಸೂಕ್ಷ್ಮ ಕೆತ್ತನೆ ಕೆಲಸಕ್ಕೆ ಒಳ್ಳೆಯ ನಿದರ್ಶನಗಳಾಗಿವೆ. ರಾಯಚೂರು ಜಿಲ್ಲೆಯ ಇಟಗಿಯ ಮಹಾದೇವ ದೇವಾಲಯವು ಕರ್ನಾಟಕದ ಸುಪ್ರಸಿದ್ಧ ದೇವಾಲಯಗಳಲ್ಲಿ ಒಂದು. ಅದು ಕಲ್ಯಾಣ ಚಾಲುಕ್ಯರ ವಾಸ್ತುರಚನೆಗೆ ಮತ್ತು ಕಲೆ ಕುಸುರಿನ ಉತ್ಕೃಷ್ಟ ನಿರ್ಮಾಣವಾಗಿದೆ. ಹೂವು ಅರಳಿದಂತೆ ಇಲ್ಲಿ ಕಲ್ಲರಳಿ ಕಲೆಯಾ ಬಗೆ ವಿಸ್ಮಯವನ್ನುಂಟು ಮಾಡುತ್ತದೆ.

ವಿಜಯನಗರ ಅರಸರು ಬೆಣಚುಕಲ್ಲನ್ನೇ ತಮ್ಮ ದೇವಾಲಯಗಳಿಗೆ ಬಳಸಿಕೊಂಡರು, ಅವರ ಆರಂಭದ ರಾಜಧಾನಿಯಾದ ಆನೆಗುಂದಿ ಮತ್ತು ಅವರ ಪಾಳೆಗಾರರ ಕೇಂದ್ರ ಸ್ಥಾನವಾದ ಕನಕಗಿರಿಗಳಲ್ಲಿ ಹೊಯ್ಸಳರ ಮಾದರಿಯ ದೇವಾಲಯಗಳು ಕಂಡುಬರುತ್ತವೆ. ಇವರ ಕಾಲದ ವಾಸ್ತುಶೈಲಿಯಲ್ಲಿ ಸಾಮಾನ್ಯವಾಗಿ ಗರ್ಭಗುಡಿ, ಪ್ರದಕ್ಷಣ ಪಥ, ಸುಕನಾಸಿ, ಅರ್ದ ಮಂಟಪ, ನವರಂಗ ಮತ್ತು ಮುಖ ಮಂಟಪಗಳಿರುತ್ತವೆ. ಕೃಷ್ಣದೇವರಾಯನ ಕನಕಗಿರಿಯ ಪಾಳೆಗಾರರಾಗಿದ್ದ ಉಡಿಚನಾಯಕ ಹಾಗೂ ಪ್ರೌಢದೇವರಾಯನ ಕಾಲದಲ್ಲಿದ್ದ ಪರಸ್ಪ್ಪ ಉಡಿಚನಾಯಕರ ಕಾಲದಲ್ಲಿ ಲಕ್ಷ್ಮೀನರಸಿಂಹ ದೇವಾಲಯ ನಿರ್ಮಾಣವಾಯಿತು. ಕಲೆಗೆ ಈ ನಾಡು ತನ್ನದೆಯಾದ ವಿಶಿಷ್ಟತೆಯನ್ನು ಪ್ರಾಚೀನ ಕಾಲದಿಂದಲೂ ಉಳಿಸಿಕೊಂಡು ಬಂದಿದೆ.

ಮೂರ್ತಿ ಶಿಲ್ಪ ಮತ್ತು ವಾಸ್ತುಶಿಲ್ಪ ಕಲೆಗಳಂತೆ ಅನೇಕ ಕರಕುಶಲ ಕಲೆಗಳ ಹೆಚ್ಚಿನ ಸ್ಥಾನಮಾನ ನೀಡಿದ್ದರು ಅವರ ಪತನದ ನಂತರ ಅನೇಕ ಕರಕುಶಲ ಕಲೆಗಾರರು ತಮ್ಮ ಹೊಟ್ಟೆಪಾಡಿಗಾಗಿ ಬೇರೆ ಬೇರೆ ಸ್ಥಳಗಳಿಗೆ ವಲಸೆ ಹೋದರು. ಹೀಗೆ ಬಂದವರಲ್ಲಿ ಕಿನ್ನಾಳಿ (ರಾಯಚೂರು ಜಿಲ್ಲೆ)ಯ ಕರಕುಶಲಗಾರರು ರಾಷ್ಟ್ರಮಟ್ಟದ ಖ್ಯಾತಿ ಪಡೆದ ಇವರ ಕಲಾ ಮಾದರಿಗಳು ದೇಶವಿದೇಶಗಳಲ್ಲಿ ಮನ್ನಣೆ ಪಡೆದುಕೊಂಡಿವೆ. ಈ ಕಲೆಗಾರರ ಮೂಲ ವಸ್ತು ಕಟ್ಟಿಗೆ, ಕಟ್ಟಿಗೆಯಿಂದಲೇ ಗೊಂಬೆಗಳನ್ನು ಚೌಕಿಗಳನ್ನು ತಯಾರಿಸಿ ಅದರ ಮೇಲೆ ಚಿತ್ರ ಬರೆದು ತಾವೇ ತಯಾರಿಸಿದ ಬಣ್ಣ ಹಚ್ಚಿ ಅದಕ್ಕೆ ಜೀವವನ್ನು ನೀಡುತ್ತಾರೆ. ಕಿನ್ನಾಳದ ಕೃಷ್ಣಪ್ಪ ಚಿತ್ರಗಾರ, ವೆಂಕೋಬಪ್ಪ ಚಿತ್ರಗಾರ ಈ ಕಲೆಗಾಗಿ ತಮ್ಮ ಕುಟುಂಬವನ್ನೇ ಮುಡುಪಾಗಿಟ್ಟು ರಾಜ್ಯ ಪ್ರಶಸ್ತಿ ಕೂಡಾ ಗಿಟ್ಟಿಸಿಕೊಂಡಿದ್ದಾರೆ.

ಕಟ್ಟಿಗೆಯಿಂದ ನಾನಾ ಆಕೃತಿಗಳನ್ನು ತಯಾರಿಸುವದಲ್ಲದೆ ಅದರ ಪುಡಿಯನ್ನು ನೀರಿನಲ್ಲಿ ಕಲಿಸಿ ಹದಗೊಳಿಸಿ ಬೇಕಾದ ಅಳತೆಯಂತೆ ಉಂಡೆಗಳನ್ನು ತಯಾರಿಸಿ ಒಣಗಿದ ನಂತರ ಹಣ್ಣು, ತಕಾಇ, ಶಿವಗಣಪ, ವೀರಭದ್ರ, ನಂದಿ, ಬಸವ, ಸಿಂಹ, ಹುಲಿ, ಜಿಂಕೆ, ಕರಡಿ, ಆನೆ, ಒಂಟೆ, ಗಿಳಿ, ಹಂಸ, ಪಾರಿವಾಳ ಇನ್ನಿತರ ವಸ್ತುಗಳನ್ನು ತಯಾರಿಸಿಕೊಡುವದರಲ್ಲಿ ಎತ್ತಿದ ಕೈ ಇವರದು.

ಕುಂಬಾರಿಕೆ, ಕಂಬಾರಿಕೆ, ಬಡಿಗತನ, ಅಕ್ಕ ಸಾಲಿಗ, ಕೊರವ, ಚಮ್ಮಾರರವರೆಗೂ ತಾವು ತಯಾರಿಸುವ ವಸ್ತುಗಳಲ್ಲಿ ಹೈದರಾಬಾದ ಕರ್ನಾಟಕದ ವಿಶಿಷ್ಟತೆಯ ಸೊಗಸನ್ನು ಎದ್ದುಕಾಣುತ್ತವೆ. ಇಲ್ಲಿಯ ಹೆಣ್ಣು ಮಕ್ಕಳು ಕೂಲಿನಾಲಿ ಮಾಡಿಕೊಂಡು ಅದರ ಮಧ್ಯ ಅನೇಕ ಕರಕುಶಲ ಕಲೆಗಳಿಗೂ ರಕ್ಷಣೆವಿತ್ತಿದ್ದಾರೆ, ಅವರ ಮನೆ ಹರುಕಾಗಿರಲಿ, ಮುರುಕಾಗಿರಲಿ ರಂಗೋಲಿ ಹಾಕುವದಂತು ಮರೆಯುವದಿಲ್ಲ, ಹಬ್ಬ ಹರಿದಿನ, ವಿಶೇಷ ಕಾರ್ಯಕ್ರಮ, ಜಾತ್ರೆ ಮದುವೆ, ಮುಂಜೆ ಸಂದರ್ಭಗಳಲ್ಲಿ ರಂಗೋಲಿಗೆ ಹೊಸ ಕಳೆ ನೀಡುತ್ತಾರೆ, ರಂಗೋಲಿಯಲ್ಲಿ ಹೂವು ಬಿಡಿಸಿದರೆ ದುಂಬಿಗಳು ಬಂದು ಮುತ್ತುತ್ತವೆ; ಅಂಥಾ ಚತುರೆಯರಾಗಿದ್ದಾರೆ.

ಇವಿಷ್ಟೇ ಅಲ್ಲದೆ ಇನ್ನೂ ಗಮನಕ್ಕೆ ಬರದ ಎಷ್ಟೋ ಕಲೆಗಳು

ಹೈದರಾಬಾದ ಕರ್ನಾಟಕದ ಮೂಲೆ, ಗಲ್ಲಿ, ಸಂದಿಗೊಂದಿಗಳಲ್ಲಿವೆ. ಒಂದೊಂದು ಜನಾಂಗಿಯ ಕಲೆಯನ್ನು ಒಂದೊಂದು ವಿಶಿಷ್ಟತೆಯನ್ನು ಉಳಿಸಿಕೊಂಡು ಬಂದಿವೆ, ತನ್ನದೇ ಆದ ಸ್ವತಂತ್ರ ಪ್ರಬಂಧ ರೂಪುಗೊಳ್ಳುವಷ್ಟು ಮಾಹಿತಿಯನ್ನು ಒದಗಿಸಬಲ್ಲವು.

## ಟಿಪ್ಪಣಿಗಳು

1 . ಕಾಯಕ ಸ ಎಂ ಜಿ ಬಿರಾದಾರ್ ೫೮ ನೇ ಕನ್ನಡ ಸಾಹಿತ್ಯ ಸಮ್ಮೇಳನ ಸ್ವರಣ ಸಂಚಿಕೆ ಕಲಬುರ್ಗಿ (೧೯೮೭)

2 . ತಿರುಳಗನ್ನಡ ಸಂ ಅಲ್ಲಮಪ್ರಭು ಬೆಟ್ಟದೂರ ೬೨ ನೇ ಕನ್ನಡ ಸಾಹಿತ್ಯ ಸಮ್ಮೇಳನ ಸ್ವರಣ ಸಂಚಿಕೆ ಕೊಪ್ಪಳ್(೧೯೯೨)

3 . ಹೈದ್ರಾಬಾದ್ ಕರ್ನಾಟಕದ ಐತಿಹಾಸಿಕ ಹಿನ್ನಲೆ ಬಿ.ಮಹದೇವಪ್ಪ

4 . ಜನಪದ್ ಸಾಹಿತ್ಯ ದರ್ಶನ ಭಾಗ ೧ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ

5 . ಹೊನ್ನಸಿರಿ ಸ್ವರಣ ಸಂಚಿಕೆ

6 . ರಾಯಚೂರ್ ಜಿಲ್ಲೆಯ ೨ ನೇ ಸಾಹಿತ್ಯ ಸಮ್ಮೇಳನ ಸಿಂದನೂರ್ (೧೯೯೩)